ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.

ಸಿ.ಸಿ.1085/2025

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಹಾದೇವಸ್ವಾಮಿ ಬಿ | ಪಿ.ಡಬ್ಲ್ಯೂ.3 |
| ತಂದೆಯ ಹೆಸರು | : | ಬಸವರಾಜು | ಸಿ.ಡಬ್ಲ್ಯೂ.4 |
| ವಯಸ್ಸು | : | 34 ವರ್ಷ | |
| ವೃತ್ತಿ | : | ಪಿ.ಸಿ.ನಂ.620, ಸಿ.ಇ.ಎನ್ ಪೊಲೀಸ್ ಠಾಣೆ, ಚಿಕ್ಕಮಗಳೂರು | |
| ವಾಸ | : | ಚಿಕ್ಕಮಗಳೂರು | |

ದಿನಾಂಕಃ 08-12-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಎಪಿಪಿ ರವರಿಂದಃ-

ನಾನು ದಿಃ26.07.2024 ರಿಂದ ಇಲ್ಲಿಯವರೆಗೆ ಚಿಕ್ಕಮಗಳೂರಿನ ಸಿ.ಇ.ಎನ್ ಪೊಲೀಸ್ ಠಾಣೆಯಲ್ಲಿ ಪಿ.ಸಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ28.03.2025 ರಂದು ನಾನು ಠಾಣೆಯಲ್ಲಿ ಕರ್ತವ್ಯದಲ್ಲಿ ಇದ್ದಾಗ ಚಾಸಾ-1 ರವರು ನನ್ನನ್ನು ಹಾಗೂ ಚಾಸಾ-5 ಮತ್ತು ಚಾಸಾ-6 ರವರನ್ನು ಕರೆದು ಚಿಕ್ಕಮಗಳೂರು ತಾಲ್ಲೂಕು, ಆಲ್ದೂರು ಹೋಬಳಿಯ, ಕಬ್ಬಿಣಸೇತುವೆ ಗ್ರಾಮದ ವಾಸಿ ಪೂರ್ಣೇಶ್ ರವರು ತನ್ನ ಮನೆಯ ಹಿಂಭಾಗದ ದನದ ಕೊಟ್ಟಿಗೆ ಹತ್ತಿರ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಬಂದ ಖಚಿತ ವರ್ತಮಾನದ ಬಗ್ಗೆ ತಿಳಿಸಿ ಈ ಬಗ್ಗೆ ಠಾಣಾ ಮೊಕದಮೆ

ಸಂಖ್ಯೆ:18/2025 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ದಾಳಿ ಮಾಡುವ ಬಗ್ಗೆ ಸಲಹೆ ಸೂಚನೆಗಳನ್ನು ನೀಡಿರುತ್ತಾರೆ. ನಂತರ ಚಾಸಾ-1 ರವರ ಕಾರ್ ನಂ.ಕೆಎ-20/ಎಂಎ-6921 ರಲ್ಲಿ ಸಂಜೆ:06.50 ಗಂಟೆಗೆ ಠಾಣೆಯಿಂದ ಹೊರಟು ಕಬ್ಬಿಣಸೇತುವೆ ಗ್ರಾಮಕ್ಕೆ ಸಂಜೆ:07.20 ಗಂಟೆಗೆ ತಲುಪಿರುತ್ತೇವೆ. ಕಬ್ಬಿಣಸೇತುವೆ ಗ್ರಾಮದ ಹತ್ತಿರ ಇರುವ ಪೆಟ್ರೋಲ್ ಬಂಕ್ ಬಳಿ ಕಾರನ್ನು ನಿಲ್ಲಿಸಿ ರಸ್ತೆ ಬದಿಯಲ್ಲಿ ನಿಂತಿದ್ದ ಚಾಸಾ-2 ಮತ್ತು ಚಾಸಾ-3 ರವರನ್ನು ಕರೆದು ಅವರಿಗೆ ವಿಷಯವನ್ನು ತಿಳಿಸಿ ಅವರನ್ನು ಪಂಚರನ್ನಾಗಿ ಸಹಕರಿಸುವಂತೆ ಕೋರಿಕೊಂಡಾಗ ಅವರು ಒಪ್ಪಿದ್ದ ಬಗ್ಗೆ ಅವರಿಗೆ ನೋಟೀಸ್ ಅನ್ನು ನೀಡಿರುತ್ತಾರೆ. ನಂತರ ಪಂಚರನ್ನು ಹಾಗೂ ನಮ್ಮನ್ನು ಕರೆದುಕೊಂಡು ಪೂರ್ಣೇಶ್ ಗೌಡರವರ ಮನೆಯ ಹತ್ತಿರ ಹೋಗಿ ನೋಡಲಾಗಿ ಮನೆಯ ಬಾಗಿಲು ಬೀಗ ಹಾಕಲಾಗಿತ್ತು. ಪಕ್ಕದ ಶೆಡ್ ನ ಹತ್ತಿರ ನಿಂತು ನೋಡಿದಾಗ ಒಬ್ಬ ವ್ಯಕ್ತಿಯು ಬಿಳಿ ಬಣ್ಣದ ಪ್ಲಾಸ್ಟೀಕ್ ಚೀಲದಲ್ಲಿ ಅಕ್ರಮವಾಗಿ ಮದ್ಯವನ್ನು ಇಟ್ಟುಕೊಂಡು ಜನರಿಗೆ ಮಾರಾಟ ಮಾಡುತ್ತಿರುವುದು ಕಂಡುಬಂತು.

ನಂತರ ನಾವು ಮೊಬೈಲ್ ಟಾರ್ಚ್ ನ ಬೆಳಕಿನ ಸಹಾಯದಿಂದ ಸ್ಥಳದ ಹತ್ತಿರ ಹೋದಾಗ ಆರೋಪಿ ಪೂರ್ಣೇಶ್ ಗೌಡನು ಪೊಲೀಸ್ ಪೊಲೀಸ್ ಎಂದು ಹೇಳಿ ಓಡಿ ಹೋಗಿರುತ್ತಾನೆ. ನಾವು ಆತನನ್ನು ಹಿಡಿಯಲು ಪ್ರಯತ್ನಪಟ್ಟರೂ ಕೂಡಾ ಆತ ಕಾಫಿ ತೋಟದ ಒಳಗಡೆ ಓಡಿ ಹೋಗಿರುತ್ತಾನೆ. ನಂತರ ಸದರಿ ಸ್ಥಳದಲ್ಲಿ ಮದ್ಯವನ್ನು ಖರೀದಿ ಮಾಡಲು ಬಂದಿದ್ದ ಇಬ್ಬರು ಗ್ರಾಹಕರನ್ನು ವಿಚಾರಿಸಲಾಗಿ ಅವರು ತಾವು ಪೂರ್ಣೇಶ್ ರವರ ಹತ್ತಿರ ಮದ್ಯವನ್ನು ಖರೀದಿ ಮಾಡಲು ಬಂದಿರುವುದಾಗಿ ತಿಳಿಸಿರುತ್ತಾರೆ. ಸದರಿ

ಗ್ರಾಹಕರ ಬಳಿ ಪೊಲೀಸ್ ನೋಟೀಸ್ ಗೆ ಸಹಿ ಹಾಕಿ ಮಹಜರ್ ಗೆ ಸಹಕರಿಸುವಂತೆ ಕೇಳಿದಾಗ ಅವರು ಒಪ್ಪಿರುವುದಿಲ್ಲ. ನಂತರ ಸ್ಥಳದಲ್ಲಿ ಇದ್ದ ಬಿಳಿ ಬಣ್ಣದ ಪ್ಲಾಸ್ಟೀಕ್ ಚೀಲವನ್ನು ನೋಡಿದಾಗ ಅದರಲ್ಲಿ ಮದ್ಯ ತುಂಬಿದ ಪೌಚುಗಳು ಇದ್ದವು. ಅದರಲ್ಲಿ ಓರಿಜಿನಲ್ ಚಾಯ್ಸ್ ವಿಸ್ಕಿಯ 90 ಎಂ.ಎಲ್ ನ ಒಟ್ಟು 45 ಪೌಚುಗಳು, ಕ್ಯಾಪ್ಟನ್ ಮಾರ್ಟೀನ್ ಸ್ಪೆಷಲ್ ವಿಸ್ಕಿಯ 90 ಎಂ.ಎಲ್ ನ ಒಟ್ಟು 23 ಪೌಚುಗಳು, ಓಲ್ಡ್ ಟವರಿನ್ ವಿಸ್ಕಿಯ 180 ಎಂ.ಎಲ್ ನ ಒಟ್ಟು 7 ಪೌಚುಗಳು, ಬ್ಯಾಕ್ ಪೈಪರ್ ವಿಸ್ಕಿಯ 90 ಎಂ.ಎಲ್ ನ ಒಟ್ಟು 7 ಪೌಚುಗಳು ಇದ್ದವು. ಅವುಗಳ ಬ್ಯಾಚ್ ನಂಬರ್ ಹಾಗೂ ಸೀರಿಯಲ್ ನಂಬರ್ ಅನ್ನು ನಮೂದು ಮಾಡಿರುತ್ತೇವೆ. ಅವುಗಳೆಲ್ಲವನ್ನೂ ಅದೇ ಬಿಳಿ ಬಣ್ಣದ ಪ್ಲಾಸ್ಟೀಕ್ ಚೀಲದಲ್ಲಿ ಹಾಕಿ ಪಿ ಎಂದು ಸೀಲು ಮಾಡಿರುತ್ತೇವೆ. ಸದರಿ ಸ್ಥಳದಲ್ಲಿ ಫೋಟೋವನ್ನು ನನ್ನ ಮೊಬೈಲ್ ನಿಂದ ತೆಗೆದಿರುತ್ತೇನೆ. ಮಹಜರ್ ಅನ್ನು 07.40 ರಿಂದ 08.40 ರವರೆಗೆ ತಯಾರಿಸಿರುತ್ತೇವೆ. ನಂತರ ಠಾಣೆಗೆ ವಾಪಾಸಾಗಿ ಸದರಿ ಫೋಟೋವನ್ನು ನನ್ನ ಮೊಬೈಲ್ ನಿಂದ ಠಾಣಾ ಕಂಪ್ಯೂಟರ್ ಮೂಲಕ ಸಿ.ಡಿಗೆ ವರ್ಗಾಯಿಸಿರುತ್ತೇನೆ. ನಂತರ ಫೋಟೋದ ಹ್ಯಾಷ್ ವ್ಯಾಲ್ಯೂ ತೆಗೆದು 65(ಬಿ) ಪ್ರಮಾಣ ಪತ್ರವನ್ನು ನೀಡಿರುತ್ತೇನೆ.

ಮಹಜರ್ ಅನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ನನ್ನ ಸಹಿ ನಿಪಿ-2(ಸಿ) ಇರುತ್ತದೆ. 2 ಫೋಟೋಗಳನ್ನು ನೋಡುತ್ತಿದ್ದು ಅದನ್ನು ಒಟ್ಟಾಗಿ ನಿಪಿ-5 ಎಂದು ಗುರುತಿಸಲಾಯಿತು. ಸಿ.ಡಿ.ಯನ್ನು ನೋಡುತ್ತಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು.

63(4)(ಸಿ) ಪ್ರಮಾಣ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-7(ಎ) ಇರುತ್ತದೆ. ತನಿಖಾಧಿಕಾರಿಯ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಇರುವ ಒಟ್ಟು 75 ಮಧ್ಯದ ಟೆಟ್ರಾ ಪ್ಯಾಕೇಟ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ.1 ಎಂದು ಹಾಗೂ ಬಿಳಿ ಬಣ್ಣದ ಪ್ಲಾಸ್ಟೀಕ್ ಚೀಲವನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.2 ಎಂದು ಗುರುತಿಸಲಾಯಿತು. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-

ನಮ್ಮ ಠಾಣೆಯಿಂದ ಘಟನಾ ಸ್ಥಳ ಸುಮಾರು 16 ರಿಂದ 18 ಕಿ.ಮೀ ದೂರ ಇರುತ್ತದೆ. ನಾವು ಘಟನಾ ಸ್ಥಳದಿಂದ ಸುಮಾರು 100 ರಿಂದ 150 ಮೀಟರ್ ದೂರದಲ್ಲಿ ನಮ್ಮ ಕಾರನ್ನು ನಿಲ್ಲಿಸಿದ್ದೆವು. ಆರೋಪಿಯು ಮಧ್ಯವನ್ನು ಮಾರಾಟ ಮಾಡುವುದನ್ನು ಸುಮಾರು 50 ಅಡಿ ಅಂತರದಲ್ಲಿ ನೋಡಿರುತ್ತೇವೆ. ಆರೋಪಿಯು ಮಧ್ಯವನ್ನು ಮಾರಾಟ ಮಾಡುವುದನ್ನು ವೀಡಿಯೋ ಚಿತ್ರಿಕರಣ ಮಾಡಲು ಯಾವುದೇ ತೊಂದರೆ ಇರಲಿಲ್ಲ. ಸತ್ಯ ಮರೆ ಮಾಚಲು ನಾವು ವೀಡಿಯೋ ಚಿತ್ರೀಕರಣ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ಮಧ್ಯ ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಸುಮಾರು 4 ರಿಂದ 6 ಗ್ರಾಹಕರು ಇದ್ದರು. ಅವರ ಪೈಕಿ ಕೆಲವರು ಓಡಿ ಹೋಗಿದ್ದು ಇಬ್ಬರನ್ನು ವಿಚಾರಣೆ ಮಾಡಿರುತ್ತೇವೆ. ಸದರಿ ಗ್ರಾಹಕರ ಹೆಸರು ಮತ್ತು ವಿಳಾಸವನ್ನು ಪಡೆದುಕೊಳ್ಳಲು ವಿಚಾರಿಸಿದಾಗ ಅವರು ಹೇಳಲು

ನಿರಾಕರಿಸಿರುತ್ತಾರೆ. ಆರೋಪಿಯು ಧರಿಸಿದ್ದ ಬಟ್ಟೆಯ ಬಣ್ಣ ಹಾಗೂ ಚಹರೆಯನ್ನು ಬರೆಯಲು ತೊಂದರೆ ಇರಲಿಲ್ಲ. ಸದರಿ ಘಟನಾ ಸ್ಥಳದಲ್ಲಿ ಯಾರೂ ಇರಲಿಲ್ಲ ಎಂದರೆ ಸರಿಯಲ್ಲ. ನಾವು ಘಟನಾ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಈಗ ನನಗೆ ತೋರಿಸುತ್ತಿರುವ ನಿಪಿ-5 ಫೋಟೋದಲ್ಲಿ ಪ್ಲಾಸ್ಟೀಕ್ ಚೀಲವನ್ನು ಮಡಚಿರುವುದು ಕಂಡುಬರುತ್ತಿತ್ತು ಎಂದರೆ ಸರಿ. ಈಗ ನನಗೆ ತೋರಿಸುತ್ತಿರುವ ಮು.ಮಾ.2 ಪ್ಲಾಸ್ಟೀಕ್ ಚೀಲವನ್ನು ಮಡಚಿದಲ್ಲಿ ಕಿತ್ತಳೆ ಬಣ್ಣ ಕಂಡುಬರುತ್ತಿತ್ತು ಎಂದರೆ ಸರಿ. ಈ ಕೇಸಿಗಾಗಿ ಮು.ಮಾ.1 ಮತ್ತು 2 ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ-5 ರಲ್ಲ ಕಂಡುಬರುತ್ತಿರುವ ಮುದ್ದೆ ಮಾಲಿಗೂ ಹಾಗೂ ಮು.ಮಾ.1 ಮತ್ತು 2 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿಗೂ ಮತ್ತು ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ನಾವು ಮೊಬೈಲ್ ನಿಂದ ಫೋಟೋವನ್ನು ತೆಗೆದಲ್ಲಿ ಮೊಬೈಲ್ ನ ಮಾಡೆಲ್ ನಮೂದು ಆಗುತ್ತದೆ ಎಂದರೆ ಸಾಕ್ಷಿದಾರರು ನಾವು ಈ ಬಗ್ಗೆ ಸೆಟ್ಟಿಂಗ್ ಮಾಡಿದಲ್ಲಿ ಮಾತ್ರ ನಮೂದು ಆಗುತ್ತದೆ ಎಂದು ನುಡಿಯುತ್ತಾರೆ. ನನಗೆ ಕಂಪ್ಯೂಟರ್ ತರಬೇತಿಯಾಗಿದ್ದ ಬಗ್ಗೆ ದಾಖಲೆಯನ್ನು ನೀಡಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಯಾವ ಕಂಪ್ಯೂಟರ್ ನಿಂದ ವರ್ಗಾವಣೆ ಮಾಡಿರುತ್ತೇನೆ ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿ. ಸದರಿ ಕಂಪ್ಯೂಟರ್ ನ ಸಂಪೂರ್ಣ ವಿವರಣೆ ನೀಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಮೇಲಾಧಿಕಾರಿಗಳ ಮಾತು ಕೇಳಿ ನಾನು ಸುಳ್ಳು ಪ್ರಮಾಣ ಪತ್ರ ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

C.C.No.1085/2025
PW-3 CW-4

ಮಹಜರ್ ಅನ್ನು ಪಿ.ಸಿ.196 ಹರೀಶ್ ರವರು ಬರೆದಿರುತ್ತಾರೆ. ಸ್ಥಳದಲ್ಲಿ ಯಾವುದೇ ಮಹಜರ್ ಅನ್ನು ತಯಾರಿಸಿಲ್ಲ ಹಾಗೂ ಸದರಿ ಮಹಜರ್ ಅನ್ನು ಠಾಣೆಯಲ್ಲಿ ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ಈ ಕೇಸಿಗೆ ಸಹಾಯವಾಗಲೀ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್‌ಆರ್ಃ